# ನಮ್ಮ ಬೆಲೆ ನಾವೇ ಅರಿಯಬೇಕು

ಒಬ್ಬ ಭಗವಾನ್ ಬುದ್ಧನನ್ನು ಕೇಳಿದ, 'ಜೀವನದ ಬೆಲೆ ಏನು?' ಬುದ್ಧ ಅವನಿಗೊಂದು ಕಲ್ಲು ಕೊಟ್ಟು 'ನೀನು ಹೋಗಿ ಈ ಕಲ್ಲಿನ ಬೆಲೆಯನ್ನು ತಿಳಿದುಕೊಂಡು ಬಾ, ಆದರೆ ಇದನ್ನು ಮಾರಬೇಡ' ಎಂದು ಹೇಳಿದ.

ಆ ವ್ಯಕ್ತಿ ಸಂತೆಗೆ ಹೋದ. ಅಲ್ಲಿ ಕಿತ್ತಳೆ ಹಣ್ಣುಗಳನ್ನು ಮಾರುವವನ ಬಳಿಗೆ ಹೋಗಿ, ಕಲ್ಲನ್ನು ತೋರಿಸಿ ಕೇಳಿದ. 'ಇದರ ಬೆಲೆ ಎಷ್ಟು?'

ಹಣ್ಣು ಮಾರುವವನು ಆ ಹೊಳೆಯುವ ಕಲ್ಲನ್ನು ನೋಡಿ ಹೇಳಿದ, 'ನೀನು ಹನ್ನೆರಡು ಕಿತ್ತಲೆ ಹಣ್ಣುಗಳನ್ನು ತೆಗೆದುಕೊಂಡು, ನನಗೆ ಈ ಕಲ್ಲನ್ನು ಕೊಡು.'

ಆ ವ್ಯಕ್ತಿ ಮುಂದೆಕ್ಕೆ ಹೋದ. ತರಕಾರಿ ಮಾರುವವನಿಗೆ ಕಲ್ಲನ್ನು ತೋರಿಸಿ, ಅದರ ಬೆಲೆಯನ್ನು ಕೇಳಿದ.

'ಒಂದು ಚೀಲ ಆಲೂಗಡ್ಡೆಗಳನ್ನು ತೆಗೆದುಕೊಂಡು ನನಗೆ ಈ ಕಲ್ಲನ್ನು ಕೊಡು' ಎಂದ ಅವನು.

ಆ ವ್ಯಕ್ತಿ ಮುಂದಕ್ಕೆ ಹೋದಾಗ ಒಂದು ಬಂಗಾರದ ಅಂಗಡಿ ಸಿಕ್ಕಿತು. ಅವನು ಬಂಗಾರದ ಅಂಗಡಿಯ ಮಾಲೀಕನಿಗೆ ಕಲ್ಲನ್ನು ತೋರಿಸಿ, ಅದರ ಬೆಲೆಯನ್ನು ಕೇಳಿದ.

ಬಂಗಾರದ ವ್ಯಾಪಾರಿ ಕಲ್ಲನ್ನು ಪರೀಕ್ಷಿಸಿ ಹೇಳಿದ, 'ಈ ಕಲ್ಲನ್ನು ನನಗೆ 50 ಲಕ್ಷಕ್ಕೆ ಮಾರು.' ಆ ವ್ಯಕ್ತಿ ಒಪ್ಪದಿದ್ದಾಗ ವ್ಯಾಪಾರಿ ಹೇಳಿದ, 'ಎರಡು ಕೋಟಿ ಕೊಡುತ್ತೇನೆ. ಇದಕ್ಕೂ ಒಪ್ಪಿಗೆಯಿಲ್ಲದಿದ್ದರೆ, ಇದರ ಬೆಲೆ ಎಷ್ಟೆಂದು ಹೇಳು, ಅದನ್ನು ನಾನು ಕೊಡುತ್ತೇನೆ' ಎಂದು ಅವನು ಒತ್ತಾಯಿಸಿದ.

'ನನ್ನ ಗುರುಗಳು ಇದನ್ನು ಮಾರಬೇಡವೆಂದು ಹೇಳಿದ್ದಾರೆ' ಎಂದು ವ್ಯಕ್ತಿ ಮತ್ತೆ ಮುಂದಕ್ಕೆ ಹೋದ.

ಈಗ ಅವನು ಒಬ್ಬ ವಜ್ರದ ವ್ಯಾಪಾರಿಯ ಬಳಿಗೆ ಹೋಗಿ ಕಲ್ಲಿನ ಬೆಲೆಯನ್ನು ಕೇಳಿದ. ವಜ್ರದ ವ್ಯಾಪಾರಿ ಆ ಅತ್ಯಮೂಲ್ಯ ಕಲ್ಲನ್ನು ನೋಡಿ 'ಈ ಬೆಲೆಬಾಳುವ ಕಲ್ಲನ್ನು ಎಲ್ಲಿಂದ ತಂದೆ? ಇಡೀ ಜಗತ್ತನ್ನೇ ಮಾರಿದರೂ ಇದಕ್ಕೆ ಬೆಲೆ ಕಟ್ಟಲಾಗದು. ಇದು ಅತ್ಯಂತ ಅಮೂಲ್ಯವಾದ ಹರಳು.' ಎಂದನು.

ಆದರೆ ಆ ವ್ಯಾಪಾರಿ ಮಾತನಾಡಿದೆ ಕೂಡಲೇ ಆಶ್ಚರ್ಯದಿಂದ ಬುದ್ಧನ ಬಳಿಗೆ ಮರಳಿ ಬಂದ. ತನ್ನೆಲ್ಲಾ ಅನುಭವಗಳನ್ನು ಹೇಳಿದ ನಂತರ 'ಭಗವಾನ್, ಈಗ ಹೇಳಿ, 'ಮನುಷ್ಯನ ಜೀವನದ ಬೆಲೆ ಏನು?' ಬುದ್ಧನನ್ನು ಪ್ರಾರ್ಥಿಸಿದ.

ಬುದ್ಧ ಹೇಳಿದ, 'ನೀನು ಈ ಕಲ್ಲನ್ನು ಕಿತ್ತಳೆ ಹಣ್ಣು ಮಾರುವವನಿಗೆ ತೋರಿಸಿದಾಗ ಅವನು, ಇದರ ಬೆಲೆ 12 ಹಣ್ಣು ಎಂದ. ತರಕಾರಿಯವನು ಇದರ ಬೆಲೆ ಒಂದು ಚೀಲ ಆಲೂಗೆಡ್ಡೆಗಳು ಎಂದ. ಬಂಗಾರದ ವ್ಯಾಪಾರಿ ಇದರ ಬೆಲೆ ಎರಡು ಕೋಟಿ ಎಂದ. ವಜ್ರದ ವ್ಯಾಪಾರಿ ಜಗತ್ತನ್ನೇ ಮಾರಿದರೂ ಇದಕ್ಕೆ ಬೆಲೆ ಕಟ್ಟಲಾಗದು ಎಂದ. ಅಂತೆಯೇ ಮನುಷ್ಯನ ಜೀವನದ ಬೆಲೆಯೂ ಹಾಗಿದೆ. ನೀನು ಸ್ವತಃ ಅತ್ಯಂತ ಅಮೂಲ್ಯ ವಜ್ರವೇ ಆಗಿದ್ದೀಯ! ಆದರೆ ನಿನ್ನ ಎದುರಿಗಿರುವ ವ್ಯಕ್ತಿ, ತನ್ನ ಸಾಮರ್ಥ್ಯ, ತನ್ನ ತಿಳಿವಳಿಕೆ ಹಾಗೂ ತನ್ನ ಯೋಗ್ಯತೆಗೆ ತಕ್ಕಂತೆ ಅದಕ್ಕೆ ಬೆಲೆ ಕಟ್ಟಿದ. ಆದರೆ ಭಯಪಡಬೇಡ, ಜಗತ್ತಿನಲ್ಲಿ ನಿನ್ನ ಸಾಮರ್ಥ್ಯವನ್ನು ಅರಿಯುವವರೂ ಸಹ ಸಿಗುತ್ತಾರೆ' ಎಂದು ಬುದ್ಧ ಹೇಳಿದ.

■ ಡಿ.ಎನ್. ಶ್ರೀನಾಥ್, ಶಿವಮೊಗ್ಗ



ವಿಜಯ ಕುಮಾರಿ ಆರ್.